ಓ ಎಸ್ ನಂ. 5/2015
ಪಿ ಡಬ್ಲ್ಯೂ: 2
ದಿನಾಂಕ 22-02-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1ನೇ ಪ್ರತಿವಾದಿ ಪರ: ಶ್ರೀ ಹೆಚ್ ಎನ್ ಎಸ್ ವಕೀಲರಿಂದ:**

ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ 1992 ರಲ್ಲಿ ವಿಭಾಗವಾಗಿರುವುದು ನನಗೆ ಗೊತ್ತು. ಅದರಂತೆ ಅವರೆಲ್ಲಾರೂ ಖಾತೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.4, 1 ನೇ ಪ್ರತಿವಾದಿಗೆ ಮಂಜೂರಾಗಿದೆ ಎಂದರೆ ನಿಜ. ದಾವಾ ಐಟಂ ನಂ.1 ರ ಆಸ್ತಿಯನ್ನು 1 ನೇ ಪ್ರತಿವಾದಿ ಕ್ರಯ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎರಡೂ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅವುಗಳಲ್ಲಿ ಬೇರೆ ಯಾರಿಗೂ ಹಕ್ಕಿಲ್ಲ ಎಂದರೆ ಸರಿಯಲ್ಲ. ವಾದಿ ಪರವಾಗಿ ಸುಳ್ಳು ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಆದಾಗ ನಾನು ಇದ್ದೆ, ಬೇರೆ ಯಾರು ಇದ್ದರೆಂದು ಗೊತ್ತಿಲ್ಲ ಮತ್ತು ಪಂಚಾಯಿತಿಯಾದ ದಿನಾಂಕ ಗೊತ್ತಿಲ್ಲ.

**ಪಾಟೀ ಸವಾಲು: 2, 3 ಮತ್ತು 6ನೇ ಪ್ರತಿವಾದಿ ಪರ: ಶ್ರೀ ಬಿ ಆರ್ ವಕೀಲರಿಂದ:**

ಈ ಕೇಸನ್ನು ಓಬಳಪ್ಪ, ಗೋವಿಂದಪ್ಪ ಇತರರ ವಿರುದ್ಧ ವಾದಿಗಳು ಹಾಕಿದ್ದಾರೆ. 40 ಎಕರೆ ಜಮೀನಿಗೆ ಈ ಕೇಸನ್ನು ಹಾಕಿದ್ದಾರೆ. ಅದೆಲ್ಲವೂ ಹುಲ್ಲೇಹಳ್ಳಿ ಗ್ರಾಮಕ್ಕೆ ಸೇರಿದವು. ಎಲ್ಲಾ ದಾವಾ ಆಸ್ತಿಗಳ ಖಾತೆ ಮತ್ತು ಪಹಣಿ ಓಬಳಪ್ಪನ ಹೆಸರಿನಲ್ಲಿದೆ. ಸತ್ತಪ್ಪ ಎಂಬುವವರು ಮರಣ ಹೊಂದಿ ಸುಮಾರು 50 ವರ್ಷಗಳಾಗಿರಬಹುದು. ತಿಮ್ಮಪ್ಪ

ಮರಣ ಹೊಂದಿ ಸುಮಾರು 15 ವರ್ಷಗಳಾಗಿರಬಹುದು. ಸಗುನಪ್ಪ ಮರಣ ಹೊಂದಿ ಸುಮಾರು 20 ವರ್ಷಕ್ಕಿಂತ ಹೆಚ್ಚಾಗಿದೆ. ಸತ್ತಪ್ಪ ಮರಣ ಹೊಂದುವ ಕಾಲಕ್ಕೆ ಓಬಳಪ್ಪ, ತಿಮ್ಮಪ್ಪ ಬೇರೆ ಬೇರೆ ವಾಸ ಇದ್ದರು ಎಂದರೆ ಸರಿಯಲ್ಲ, ಒಟ್ಟಾಗಿ ಇದ್ದರು. ಸತ್ತಪ್ಪ ಮರಣ ಹೊಂದಿದ 20 ವರ್ಷಗಳವರೆಗೂ ಅವರೆಲ್ಲ ಒಟ್ಟಾಗಿ ವಾಸ ಇದ್ದರು. ಓಬಳಪ್ಪನಿಗೆ ನರಸಿಂಹಪ್ಪ ಮತ್ತು ಲೋಕೇಶ ಎಂಬ ಮಕ್ಕಳು. ಸದರಿ ನರಸಿಂಹಪ್ಪ ಮತ್ತು ಲೋಕೇಶ ಇವರು ಸಹ ಬೇರೆ ಬೇರೆ ಮನೆಯಲ್ಲಿ ವಾಸ ಇದ್ದಾರೆ ಎಂದರೆ ನಿಜ. ಅವರು ಬಹಳ ವರ್ಷಗಳಿಂದ ಬೇರೆ ಬೇರೆ ಇದ್ದಾರೆ.

ಹನುಮಂತಪ್ಪ ಮತ್ತು ಸಣ್ಣಗೋವಿಂದಪ್ಪ ಬೇರೆ ಬೇರೆ ವಾಸ ಇರುವುದಿಲ್ಲ, ಒಂದೇ ಮನೆಯಲ್ಲಿ ವಾಸ ಇದ್ದಾರೆ. ನಮ್ಮ ಊರಿನಲ್ಲಿರುವ ಹಿಟ್ಟಿನ ಗಿರಣಿ ಮಲ್ಲಪ್ಪನ ಮಗನದ್ದು. ಸರ್ವೆ ನಂ. 9/4 ಮತ್ತು 162 ಇವುಗಳ ಖಾತೆ ಮೊದಲು ಸತ್ತಪ್ಪನ ಹೆಸರಿನಲ್ಲಿ ಇದ್ದುದ್ದನ್ನು ನಾನು ನೋಡಿಲ್ಲ. ಆನಂತರ ಸತ್ತಪ್ಪನ 4 ಜನ ಮಕ್ಕಳಿಗೆ ಎಂ ಆರ್ ನಂ.11/1992-93 ರಂತೆ ಖಾತೆಯಾಗಿರುವ ಬಗ್ಗೆ ನಾನು ನೋಡಿಲ್ಲ. ಹನುಮಂತಪ್ಪ ಮತ್ತು ಸಣ್ಣ ಗೋವಿಂದಪ್ಪ ಎಷ್ಟು ಜಮೀನುಗಳಲ್ಲಿ ಮತ್ತು ಯಾವ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ.

ನರಸಿಂಹಪ್ಪ ಮತ್ತು ಲೋಕೇಶ್ ಎಷ್ಟು ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಸತ್ತಪ್ಪನ ಮಕ್ಕಳಾದ ಓಬಳಪ್ಪ, ತಿಮ್ಮಪ್ಪ, ಸಗುನಪ್ಪ ಮತ್ತು ಗೋವಿಂದಪ್ಪ ಇವರು ಎಷ್ಟು ಎಷ್ಟು ವಿಸ್ತೀರ್ಣದಲ್ಲಿ ಸಾಗುವಳಿ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ 4 ಜನರು ಅವರವರ ಜಮೀನುಗಳಲ್ಲಿ ಬೆಳೆದ ಫಸಲನ್ನು ಅವರವರೇ ಉಪಯೋಗಿಸಿಕೊಂಡು ಬಂದಿದ್ದಾರೆ ಎಂದರೆ ನಿಜ.

ಸಣ್ಣಗೋವಿಂದಪ್ಪನಿಗೆ ಹಿಟ್ಟಿನ ಗಿರಣಿ ನಮ್ಮ ಊರಿನಲ್ಲಿದೆ ಎಂದರೆ ನಿಜ. ಸದರಿ ಸಣ್ಣಗೋವಿಂದಪ್ಪ ಹಿಟ್ಟಿನ ಗಿರಣಿಯ ಜತೆ ಒಂದು ಅಂಗಡಿಯನ್ನು ಸಹ ನಡೆಸುತ್ತಿದ್ದಾರೆ ಎಂದರೆ ನಿಜ. ಹಿಟ್ಟಿನ ಗಿರಣಿ ಮತ್ತು ಅಂಗಡಿ ಇರುವ ಜಾಗ ಸಣ್ಣಗೋವಿಂದಪ್ಪನ ಹೆಸರಿನಲ್ಲಿದೆ. ಅವರು ವಾಸ ಮಾಡುತ್ತಿರುವ ಮನೆಯ ಖಾತೆಯ ಸಹ ಸಣ್ಣಗೋವಿಂದಪ್ಪನ ಹೆಸರಿನಲ್ಲಿದೆ.

ತಿಮ್ಮಪ್ಪ ಮತ್ತು ಅವರ ಮಕ್ಕಳು 4 ಮನೆಗಳಲ್ಲಿ ವಾಸ ಮಾಡುತ್ತಿದ್ದರು. ಸಣ್ಣಗೋವಿಂದಪ್ಪನ ಹೆಸರಿನಲ್ಲಿ ಖಾತೆ ಇರುವ ಜಮೀನನ್ನು ವಿಜಯಾ ಬ್ಯಾಂಕಿನಲ್ಲಿ ಆಧಾರ ಮಾಡಿ ಸಾಲ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ. ಬ್ಯಾಂಕಿನಲ್ಲಿ ಸಾಲ ಪಡೆಯಬೇಕಾದರೆ ಸಾಲ ಪಡೆಯುವವರ ಹೆಸರಿನಲ್ಲಿ ಪಹಣಿ ಮತ್ತು ಪಟ್ಟಾ ಇರಬೇಕು ಎಂದರೆ ನಿಜ. 1 ನೇ ಪ್ರತಿವಾದಿಯ ಮಕ್ಕಳಾದ ನರಸಿಂಹಪ್ಪ ಮತ್ತು ಲೋಕೇಶ ರವರು ಸಹ ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಓಬಳಪ್ಪ, ತಿಮ್ಮಪ್ಪ, ಸಗುನಪ್ಪ ಮತ್ತು ಗೋವಿಂದಪ್ಪರವರ ಒಟ್ಟು ಕುಟುಂಬದಲ್ಲಿ ತಿಮ್ಮಪ್ಪನ ಮಕ್ಕಳು ಸ್ವಾಧೀನ ಇರುವ ಆಸ್ತಿಗಳನ್ನು ಬಿಟ್ಟು ಉಳಿದ ಆಸ್ತಿಗಳಿಗಾಗಿ ಈ ಕೇಸು ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಸಗುನಪ್ಪನ ಹೆಂಡತಿ ರತ್ನಮ್ಮ ಮತ್ತು ಅವರ ಮಗ ಸಗುನಿರಂಗಪ್ಪ ನನಗೆ ಗೊತ್ತು. ಸಗುನಪ್ಪನಿಗೆ ವಿಭಾಗದಲ್ಲಿ ಬಂದಿದ್ದ ಆಸ್ತಿಯನ್ನು ಅವರ ಮರಣದ ನಂತರ ಅವರ ಹೆಂಡತಿ ಮತ್ತು ಮಗ ಗೋವಿಂದಪ್ಪನಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಹುಲ್ಲೇಹಳ್ಳಿ ಗ್ರಾಮದಲ್ಲಿ ಇಲ್ಲ ಎಂದರೆ ಸರಿಯಲ್ಲ. ಹುಲ್ಲೇಹಳ್ಳಿ ಗ್ರಾಮದಲ್ಲಿರುವ ಆಸ್ತಿಗಳನ್ನು ಹೊರತು ಪಡಿಸಿ ಸತ್ತಪ್ಪನಿಗೆ ಬೇರೆ ಊರಿನಲ್ಲಿ ಆಸ್ತಿಗಳು ಇರುವುದಿಲ್ಲ. ಹುಲ್ಲೇಹಳ್ಳಿ ಗ್ರಾಮದಲ್ಲಿರುವ

ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಕಡೆ ಇರುವ ಆಸ್ತಿಗಳು ಸ್ವತಂತ್ರ ಆಸ್ತಿಗಳಾಗಿದ್ದು, ಅದರಲ್ಲಿ ಯಾರಿಗೂ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ.

ಸತ್ತಪ್ಪನ ಮಕ್ಕಳು ನಡುವೆ 35 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡಿದ್ದು, ಸತ್ತಪ್ಪನ ಮೊಮ್ಮಕ್ಕಳು ಸಹ ವಿಭಾಗ ಮಾಡಿಕೊಂಡಿದ್ದರು ವಿಭಾಗವಾಗಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ತಮ್ಮಂದಿರ ವಿರುದ್ದ ನಾನು ಸಹ ಒಂದು ಕೇಸು ಹಾಕಿದ್ದೇನೆ. ಆ ಕೇಸಿನಲ್ಲಿ ತಿಮ್ಮಪ್ಪನ ಮಗ 1ನೇ ವಾದಿಯಾದ ಹನುಮಂತಪ್ಪ ನನ್ನ ಪರ ಸಾಕ್ಷಿ ಹೇಳಿದ್ದಾರೆ ಎಂದರೆ ಸರಿಯಲ್ಲ. ಈಗಾಗಲೇ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಎರಡು ತಲೆಮಾರಿನ ಹಿಂದೆಯೇ ವಿಭಾಗವಾಗಿ ಅದು ಜಾರಿಯಾಗಿದ್ದರು ಸಹ ವಿಭಾಗವಾಗಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸತ್ತಪ್ಪ ಮತ್ತು ಆತನ 4 ಜನ ಮಕ್ಕಳ ನಡುವೆ ಒಟ್ಟು ಕುಟುಂಬದ ಅಸ್ತಿತ್ವ ಇಲ್ಲ ಎಂದರೆ ಸರಿಯಲ್ಲ. ಸತ್ತಪ್ಪನ ಮೊಮ್ಮಕ್ಕಳು ಸಹ ವಿಭಾಗವಾಗಿ ಅದರಂತೆ ಖಾತೆ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದರೂ ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.